ಸದನದಲ್ಲಿ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತೆರಡನೆಯ ಅಧಿವೇಶನ
ಸೋಮವಾರ, ದಿನಾಂಕ: 14ನೇ ಡಿಸೆಂಬರ್, 2020

ಆನ್‌ಲೈನ್ ಶಿಕ್ಷಣ ಕುರಿತು

ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) -

78(616) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಆನ್‌ಲೈನ್ ಶಿಕ್ಷಣದ ಬಗ್ಗೆ ರಾಜ್ಯದ ಪ್ರಯೋಗದಲ್ಲಿ ಸರ್ಕಾರ ಕಂಡುಕೊಂಡಿರುವ ಅನುಭವದ ಅಂಶಗಳ ವಿವರಗಳನ್ನು ಒದಗಿಸುವುದು;

(ಆ) ಕೊರತೆಗಳನ್ನು ನೀಗಿಸಲು ಅಗತ್ಯವಿರುವ ಕ್ರಮಗಳೇನು;

(ಇ) ವಿದ್ಯಾರ್ಥಿಗಳಿಗೆ ಮೊಬೈಲ್ ಅಥವಾ ಟ್ಯಾಬ್‌ಗಳ ಕೊರತೆಯನ್ನು ನೀಗಿಸಲು ಸರ್ಕಾರದ ಚಿಂತನೆಗಳೇನು; ಇವುಗಳನ್ನು ಸರ್ಕಾರ ಹೇಗೆ ಜಾರಿಗೆ ತರುತ್ತದೆ;

(ಈ) ಕೊರೋನಾ ಶೈಕ್ಷಣಿಕ ವರ್ಷದ ನಂತರದ ವರ್ಷಗಳಲ್ಲಿ ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ Resource Bank ಸ್ಥಾಪನೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?